# ಸುರತ್ಕಲ್ ಎನ್ಐಟಿಕೆ ತಂಡಕ್ಕೆ ಪ್ರಶಸ್ತಿ



**ಅಖಿಲ ಭಾರತ ಅಂತರ ಎನ್ಐಟಿ ಟೂರ್ನಮೆಂಟ್-2024 ರಲ್ಲಿ ಎನ್ಐಟಿಕೆ ಸುರತ್ಕಲ್ ತಂಡ ಚಾಂಪಿಯನ್ಸ್ ಆಫ್ ದಿ ಫೀಲ್ಡ್ ಟೈಟಲ್ ಪ್ರಶಸ್ತಿ ಪಡೆಯಿತು.**

**ಮಂಗಳೂರು:** ಅಖಿಲ ಭಾರತ ಅಂತರ ಎನ್ಐಟಿ ಟೂರ್ನಮೆಂಟ್-2024ರಲ್ಲಿ ಎನ್ ಐಟಿಕೆ ಸುರತ್ಕಲ್ ತಂಡ ಚಾಂಪಿಯನ್ಸ್ ಆಫ್ ದಿ ಫೀಲ್ಡ್ ಟೈಟಲ್ ಪ್ರಶಸ್ತಿ ಪಡೆದಿದೆ. ಈ ಕ್ರೀಡಾಕೂಟದಲ್ಲಿ ಎನ್ಐಟಿಕೆ ಸುರತ್ಕಲ್ ತಂಡ ಹಾಕಿ ಮತ್ತು ಕ್ರಿಕೆಟ್‌ನಲ್ಲಿ ಚಿನ್ನ ಮತ್ತು ಕಂಚಿನ ಪದಕಗಳನ್ನು ತನ್ನದಾಗಿಸಿಕೊಂಡಿದೆ. ಇತ್ತೀಚೆಗೆ ತಮಿಳುನಾಡಿನ ಎನ್ ಐಟಿ ತಿರುಚ್ಚಿಯಲ್ಲಿ ಅಂತರ ಎನ್ಐಟಿ ಟೂರ್ನಮೆಂಟ್ ನಡೆಯಿತು. ಪುರುಷರ ಹಾಕಿ ಪಂದ್ಯಾವಳಿಯಲ್ಲಿ ಭಾಗವಹಿಸಿದ ಎನ್ಐಟಿಕೆ ಸುರತ್ಕಲ್ ತಂಡ ವಿಜಯಶಾಲಿಯಾಗಿ ಹೊರಹೊಮ್ಮಿತು. ಲೀಗ್ ಕಮ್ ನಾಕೌಟ್ ಆಧಾರದ ಮೇಲೆ ಆಡಿದ ಪಂದ್ಯಗಳು ಎನ್ಐಟಿಕೆ ಸುರತ್ಕಲ್ ಚಿನ್ನದ ಪದಕದೊಂದಿಗೆ ಮುಕ್ತಾಯಗೊಂಡವು.

ಪುರುಷರ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಿದ ಎನ್ಐಟಿಕೆ ಸುರತ್ಕಲ್ ತಂಡ ಲೀಗ್ ಕಮ್ ನಾಕೌಟ್ ಮಾದರಿಯಲ್ಲಿ ನಡೆದ ಕ್ರಿಕೆಟ್‌ನಲ್ಲಿ ಕಂಚಿನ ಪದಕ ಪಡೆಯಿತು. ದ್ರೋಣಾಚಾರ್ಯ ಪ್ರಶಸ್ತಿ ಪುರಸ್ಕೃತ ಮತ್ತು ಭಾರತೀಯ ರಾಷ್ಟ್ರೀಯ ಅಥ್ಲೆಟಿಕ್ ತಂಡದ ಮುಖ್ಯ ತರಬೇತುದಾರ ಪಿ.ರಾಧಾಕೃಷ್ಣನ್ ನಾಯರ್ ಮುಖ್ಯ ಅತಿಥಿಗಳಾಗಿದ್ದರು.

Vijaya Karnataka, Date:18/01/24, p, no -05